# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/07/ಉಗ್ರಾಣ/2016

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 01/02/2017

## ದರಪಟ್ಟಿಗಳ ಆಹ್ವಾನ

ವಿಷಯ: ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿ/ಸಿಬ್ಬಂದಿಯವರಿಗೆ ಗುರುತು ಪತ್ರ ತಯಾರಿಸಿ ಸರಬರಾಜು ಮಾಡುವ ಬಗ್ಗೆ

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿ/ಸಿಬ್ಬಂದಿಗೆ ಸುಮಾರು 200 ನೌಕರರಿಗೆ ಈ ಕೆಳಕಂಡ ವಿವರಗಳನ್ನೊಳಗೊಂಡಂತೆ ಗುರುತು ಪತ್ರ (ದಾರ ಹಾಗೂ ಕವಚವನ್ನೊಳಗೊಂಡಂತೆ) ತಯಾರಿಸಿಕೊಳ್ಳಲು ತೀರ್ಮಾನಿಸಿದೆ. ಆದುದರಿಂದ ಗುರುತು ಪತ್ರವನ್ನು ಯಾವ ದರದಲ್ಲಿ ತಯಾರಿಸಿ ಸರಬರಾಜು ಮಾಡುತ್ತೀರಿ ಎಂಬ ಬಗ್ಗೆ ಆಸಕ್ತ ಸಂಸ್ಥೆಗಳಿಂದ ಸ್ವರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಗಳವರು ಕೆಳಕಂಡ ನಿಬಂಧನೆಗೊಳಪಟ್ಟು ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ:10-02-2017ರೊಳಗಾಗಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂಗಳೂರು ಇಲ್ಲಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ತಲುಪಿಸಲು ಕೋರಲಾಗಿದೆ.

| | |
|---|---|
| **ಕರ್ನಾಟಕ ಸರ್ಕಾರ**<br><br>ನಿರ್ದೇಶಕರು<br>ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ ಬೆಂಗಳೂರು<br>ದೂರವಾಣಿ:22200291<br><br>ಭಾವಚಿತ್ರ<br><br>ನೌಕರರ ಸಂಖ್ಯೆ:<br>ಹೆಸರು:<br>ಹುದ್ದೆ:<br><br>ನೌಕರರ ಸಹಿ | ಹುಟ್ಟಿದ ದಿನಾಂಕ:<br>ಮನೆ ವಿಳಾಸ:<br>ಪಾನ್ ನಂ:<br>ರಕ್ತದ ಗುಂಪು:<br>ಆಧಾರ ಸಂಖ್ಯೆ:<br>ದೂರವಾಣಿ ಸಂ:<br><br>ಈ ಗುರುತಿನ ಚೀಟಿಯನ್ನು ವರ್ಗಾಯಿಸುವಂತಿಲ್ಲ ಮತ್ತು ಕೇಳಿದಾಗ ತೋರಿಸತಕ್ಕದ್ದು ಈ ಗುರುತಿನ ಚೀಟಿಯು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆಯ ಸ್ವತ್ತಾಗಿದ್ದು ಕಳೆದುಹೋದರೆ ಅಥವಾ ಯಾರಿಗಾದರೂ ಸಿಕ್ಕರೆ ಕಛೇರಿಗೆ ತಿಳಿಸುವುದು.<br><br>ನಿರ್ದೇಶಕರ ಸಹಿ |

**ನಿಬಂಧನೆಗಳು:**

1. ಕಾರ್ಯಾದೇಶ ನೀಡಿದ ಒಂದು ವಾರದೊಳಗಾಗಿ ಸರಬರಾಜು ಮಾಡುವುದು.
2. ಸಮರ್ಪಕ ಸರಬರಾಜಿನ ನಂತರ ಹಣ ಪಾವತಿ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.
3. ಲಕೋಟೆ ಮೇಲ್ಭಾಗದಲ್ಲಿ Quotation not to be Opened ಎಂದು ನಮೂದಿಸತಕ್ಕದ್ದು.

ಆಡಳಿತಾಧಿಕಾರಿ

ಇವರಿಗೆ,

1. ಕ್ರಿಯೇಟಿವ್ ಗ್ರಾಫಿಕ್ ಸುಲ್ತಾನ್ ಪೇಟೆ, ಬೆಂಗಳೂರು
2. ಜೆ.ಡಿ ಆರ್ಟ್ಸ್ ನಂ.3, 1ನೇ ಮಹಡಿ, 20ನೇ ಮುಖ್ಯರಸ್ತೆ, ಮಾರನಹಳ್ಳಿ, ಬೆಂಗಳೂರು-40
3. ಕೆ.ಪಿ.ಎಸ್ ಆರ್ಟ್ಸ್, ನಂ.300, 1ನೇ ಮುಖ್ಯರಸ್ತೆ, 7ನೇ ಕ್ರಾಸ್, ಪಂಚಶೀಲನಗರ, ಮೂಡಲಪಾಳ್ಯ, ನಾಗರಭಾವಿ ರಸ್ತೆ, ಬೆಂಗಳೂರು-72
4. ಆಸಕ್ತ ಸರಬರಾಜುದಾರರಿಗೆ
5. ಕಛೇರಿ ಸೂಚನಾ ಫಲಕಕ್ಕೆ
6. ಇ-ಗವರ್ನೆನ್ಸ್, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು